## ಪೊಲೀಸ್ ಅಧೀಕ್ಷಕರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದಿನಾಂಕ:16.04.2021

### ಪತ್ರಿಕಾ ಪ್ರಕಟಣೆ

### ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ

**ಮೊ.ಸಂ.102/2021 ಕಲಂ 20(b), (2) (b) NDPS ಕಾಯ್ದೆ.**

ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಬಾಶೆಟ್ಟಿಹಳ್ಳಿಯ ಬ್ಯಾಂಕ್ ಸರ್ಕಲ್‌ನಲ್ಲಿ ದಿನಾಂಕ:15.04.2021 ರಂದು ಮಧ್ಯಾಹ್ನ 2-30 ಗಂಟೆಗೆ ಆರೋಪಿಗಳು ಎರಡು ಬ್ಯಾಗುಗಳಲ್ಲಿ ಮಾದಕ ವಸ್ತುವಾದ ಗಾಂಜಾವನ್ನು ಮಾರಾಟ ಮಾಡಲು ತಂದಿರುವುದಾಗಿ ಬಾತ್ಮೀದಾರರಿಂದ ಬಂದ ಮಾಹಿತಿ ಮೇರೆಗೆ, ದಾಳಿನಡೆಸಿ ಆರೋಪಿತರನ್ನು ವಶಕ್ಕೆ ಪಡೆದು ಅವರಿಂದ 2 ಲಕ್ಷ ಮೌಲ್ಯದ 7 ಕೆ.ಜಿ. ಗಾಂಜಾವನ್ನು ವಶಪಡಿಸಿಕೊಂಡು ಮೇಲ್ಕಂಡಂತೆ ಪ್ರಕರಣ ದಾಖಲಾಗಿರುತ್ತದೆ. ಸದರಿ ಆರೋಪಿತರು ಆಂದ್ರ ಮೂಲದವರಾಗಿದ್ದು ಗಾಂಜಾವನ್ನು ಎಲ್ಲಿಂದ ತಂದರು ಎನ್ನುವ ಬಗ್ಗೆ ತನಿಖೆ ಮುಂದುವರೆದಿದೆ.

ಮೇಲ್ಕಂಡ ದಾಳಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ರವಿ ಡಿ.ಚನ್ನಣ್ಣವರ್ ಐ.ಪಿ.ಎಸ್., ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ ಲಕ್ಷ್ಮೀಗಣೇಶ್, ದೊಡ್ಡಬಳ್ಳಾಪುರ ಉಪ-ವಿಭಾಗದ ಡಿ.ವೈ.ಎಸ್.ಪಿ. ಶ್ರೀ ಟಿ. ರಂಗಪ್ಪ ರವರ ಮಾರ್ಗದರ್ಶನದಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರವರಾದ ಶ್ರೀ ಬಿ.ಎಸ್. ಸತೀಶ್ ರವರ ನೇತೃತ್ವದಲ್ಲಿ ಪಿ.ಎಸ್.ಐ ಶ್ರೀ ಮಂಜುನಾಥ್ ಡಿ, ಸಿಬ್ಬಂದಿಗಳಾದ ಶ್ರೀ ಹನುಮಂತರಾಜು, ಶ್ರೀ ರಾಧಾಕೃಷ್ಣ, ಶ್ರೀ ರಂಗನಾಥ್, ರವರು ಯಶಸ್ವಿಗೊಳಿಸಿರುತ್ತಾರೆ.

. ಆರೋಪಿಗಳ ವಿವರ

| | |
|---|---|
|  |  |
| ಪಠಾಣ್ ಮೊಹಮದ್ ಅಲಿಖಾನ್ ಬಿನ್ ಜಾಫರ್ ಖಾನ್, ವಯಸ್ಸು 23 ವರ್ಷ, ಮುಸ್ಲೀಮ್ ಜನಾಂಗ, ಎಲೆಕ್ಟ್ರಿಷಿಯನ್ ಕೆಲಸ, ನಂ.14-203, ಕೊತ್ತ ಬಸ್ ಸ್ಟ್ಯಾಂಡ್ ಎದುರು, ನಂದಿಗ್ರಾಮ, ಕೃಷ್ಣಜಿಲ್ಲೆ, ಆಂದ್ರ ಪ್ರದೇಶ, | ಎಸ್..ಕೆ. ಹನೀಫ್ ಬಿನ್ ಮಸ್ತಾನ್, ವಯಸ್ಸು 21 ವರ್ಷ, ಮುಸ್ಲೀಮ್ ಜನಾಂಗ, ಕೂಲಿಕೆಲಸ, ನಂ.90 ಕೆ.ವಿ.ಆರ್. ಸ್ಟ್ಯಾಂಡ್ ಎದುರು, ನಂದಿಗ್ರಾಮ, ಕೃಷ್ಣಜಿಲ್ಲೆ, ಆಂದ್ರ ಪ್ರದೇಶ, |

ಪೊಲೀಸ್ ಅಧೀಕ್ಷಕರು,
ಬೆಂಗಳೂರು ಜಿಲ್ಲೆ.